೧-೩೦ ಪಿ. ಎಂ.

ಶ್ರೀ ಎಂ. ಸಿ. ಬಸಪ್ಪ.—ತಾತ್ಕಾಲಿಕವಾದ ಈ ಯೋಜಗೆ ಒಂದು ವರ್ಷದಲ್ಲಿ ಎರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಆದರೆ ಅಲ್ಲಿ ನಡೆಯುತ್ತಿರತಕ್ಕಂಥ ಚಟುವಟಕೆಗಳನ್ನು ನೋಡಿದರೆ, ಈ ಎರಡೂವರೇ ಲಕ್ಷ ರೂಪಾಯಿ ನಷ್ಟವಾಗುತ್ತಿದೆ. ಆದ್ದರಿಂದ ಈ ರೀತಿ ವೇಸ್ಟ್ ಆಗುತ್ತಿರುವುದನ್ನು ನಿಲ್ಲಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಬಿ. ಶಿವಯ್ಯ.—ಮಾನ್ಯ ಸದಸ್ಯರು ಅಲ್ಲಿ ಖರ್ಚು ಮಾಡುತ್ತಿರುವ ಎರಡೂವರೆ ಲಕ್ಷ ರೂಪಾಯಿಗಳು ವೇಷ್ಟ ಎಂಬುದಾಗಿ ಹೇಳಿದರೆ ಹೇಗೆ, ಅಲ್ಲಿ ಒಂದು ಬಾವಿಯನ್ನು ತೆಗೆಯುತ್ತಿದ್ದೇವೆ, ಅದೂ ವೇಷ್ಟೇ ? ಅಲ್ಲಿ ಕಟ್ಟಡ ಕಟ್ಟುವದಕ್ಕಾಗಿ ಹಣವನ್ನು ಖರ್ಚು ಮಾಡುತ್ತಿದ್ದೇವೆ, ಇದೂ ವೇಷ್ಟೇ ? ಒಂದೆರಡು ವರ್ಷಗಳಲ್ಲಿ ಈ ಎಲ್ಲ ಕಾರ್ಯಕ್ರಮಗಳು ಪೂರ್ಣಗೊಂಡ ಮೇಲೆ ಆ ಪ್ರಾಂತದ ಜನರಿಗೆ ಇದರಿಂದ ಹೆಚ್ಚಿನ ಉಪಯೋಗವಾಗುತ್ತದೆ ಎಂಬುದಾಗಿ ತಿಳಿಸುತ್ತಿದ್ದೇನೆ.

ಶ್ರೀ ಎಂ. ಸಿ. ಬಸಪ್ಪ.—ಪ್ರಯೋಜನವಾಗಬೇಕೆಂಬುದು ನಮ್ಮ ಉದ್ದೇಶವೂ ಕೂಡ. ಅಲ್ಲಿ ಫಿಲೇಚರ್ ನಡೆಯುತ್ತಿತ್ತು. ಅದು ನಷ್ಟವಾದ ಮೇಲೆ ಅಲ್ಲಿದ್ದಂತಹ ಕಟ್ಟಡ ಪಾಳು ಬಿದ್ದಿತ್ತು. ಇಲಾಖೆಯವರು ಏನು ಮಾಡುತ್ತಿದ್ದರೆಂಬುದು ಗೊತ್ತಿಲ್ಲ. ಇದನ್ನು ಪ್ರಾಯೋಗಿಕ ಪ್ರಾಜೆಕ್ಟ್ ಎಂಬುದಾಗಿ ಹೆಸರಿಟ್ಟು ಒಂದಷ್ಟು ಜನ ಅಧಿಕಾರಿಗಳನ್ನು ಅಲ್ಲಿಗೆ ಪೋಸ್ಟ್ ಮಾಡಿದ್ದೀರಿ. ಆದರಲ್ಲಿ ೧೦ ಎಕರೆ ಪ್ರದೇಶದಲ್ಲಿ ಉಪ್ಪನೇರಳೆ ತೋಟವನ್ನು ಬಿಟ್ಟರೆ ಇನ್ನು ಯಾವುದೇ ರೀತಿಯ ತರಬೇತಿ ಕಾರ್ಯಕ್ರಮವನ್ನು ಅಲ್ಲಿ ಇಲಾಖೆಯವರು ಪ್ರಾರಂಭ ಮಾಡಿಲ್ಲ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಇದನ್ನು ತಡೆಗಟ್ಟಿ ನಾನು ಮೊದಲೇ ಹೇಳಿದ ಹಾಗೆ ತರಬೇತಿ ಕೇಂದ್ರ ಎಂಬುದಾಗಿ ಮಾಡಿ ಆಕ್ಕಪಕ್ಕದ ರೈತರಿಗೆ, ಇಲಾಖೆಯ ಅಧಿಕಾರಿಯಂವರಿಗೆ ತರಬೇತಿ ಕೊಡುವಂತಹ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಕೆ. ಬಿ. ಶಿವಯ್ಯ.—೧೭ ಎಕರೆ ೩೬ ಗುಂಟೆ ಪ್ರದೇಶದಲ್ಲಿ ಮಲಬರಿ ಎಂ.೫ ನ್ನು ಹಾಕಿದ್ದೇವೆ ಅದರ ಕಟಿಂಗನ್ನು ಸುತ್ತಮುತ್ತಲ ರೈತರಿಗೆ ಒದಗಿಸುತ್ತಿದ್ದೇವೆ. ಅಲ್ಲಿ ನೂಲು ಬಿಚ್ಚುವುದಕ್ಕೆ, ತರಬೇತಿಯನ್ನು ಕೊಡತಕ್ಕಂಥಹ ಕಾರ್ಯಕ್ರಮವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೇವೆ. ಮತ್ತೆ ಗ್ರೈನೇಜ್ ಸ್ಪನ್ನಿಂಗ್ ಮಾಡುತ್ತೇವೆ. ಮತ್ತೆ ಮಾನ್ಯ ಸದಸ್ಯರು ಹೇಳಿದಂತೆ ತರಬೇತಿಯನ್ನು ಕೊಡತಕ್ಕಂಥ ಕಾರ್ಯಕ್ರಮವನ್ನೂ ಕನ್ಸಿಡರ್ ಮಾಡೋಣ ಎಂಬುದಾಗಿ ತಿಳಿಸುತ್ತಿದ್ದೇನೆ.

ಶ್ರೀ ಎಂ. ಸಿ. ಬಸಪ್ಪ.—ಇದಕ್ಕೆ ಒಂದು ಟೈಂ ಬೌಂಡ್ ಪ್ರೋಗ್ರಾಂ ಕೊಟ್ಟು ಇಷ್ಟೇ ವರ್ಷಗಳಲ್ಲಿ ಪೂರೈಸುತ್ತೇವೆ ಎಂಬುದಾಗಿ ಇಟ್ಟುಕೊಂಡರೆ, ಎಲ್ಲವನ್ನು ಕಾರ್ಯಗತ ಮಾಡಬೇಕಾದರೆ ಸುಮಾರು ಎಷ್ಟು ವರ್ಷಗಳಾಗುತ್ತವೆ, ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಬಿ. ಶಿವಯ್ಯ.—ಕಟ್ಟಡ ಕಟ್ಟಿ ಮುಗಿಸಿದ ತಕ್ಷಣವೇ ಪ್ರಾರಂಭ ಮಾಡಬೇಕೆಂಬುದು ಸರ್ಕಾರದ ಉದ್ದೇಶ.

Arkavathy Project

850 Sri C. APPAJI (Kanakapura).—Will the Chief Minister be pleased to state :—

(a) when is the Arkavathy Project going to be completed ;

(b) the estimated cost of the Project ;

(c) the area to be irrigated ;

(d) the provision in the budget for this year ;

(e) the work completed so far ?

Sri D. DEVARAJ URS (Chief Minister).—

(a) It is proposed to complete it by 1983–84.

(b) Rs. 983.00 Lakhs.

(c) 20.150 acres.

(d) Rs. 25.00 lakhs.

(e) The Preliminary works such as construction of buildings approach roads have been almost completed.

ಶ್ರೀ ಸಿ. ಅಪ್ಪಾಜಿ.—೯೮೩ ಲಕ್ಷ ರೂಪಾಯಿ ಅಂದಾಜು ಮೆಚ್ಚದಲ್ಲಿ ಪ್ರಾಜೆಕ್ಟನ್ನು ಕಟ್ಟುವುದಕ್ಕೆ ಉದ್ದೇಶಿಸಲಾಗಿದೆ ಎಂಬುದಾಗಿ ಹೇಳಿದ್ದೀರಿ, ಇಲ್ಲಿಯವರೆಗೂ ಈ ಪ್ರಾಜೆಕ್ಟ್‌ಗಾಗಿ ಖರ್ಚು ಮಾಡಿರುವ ಹಣವೆಷ್ಟು ?

† ಶ್ರೀ ಡಿ. ದೇವರಾಜ ಅರಸು.—ಇಲ್ಲಿಯವರೆಗೆ ಹೆಚ್ಚಾಗಿ ಖರ್ಚಾಗಿಲ್ಲ. ಸುಮಾರು ೨೨ ಲಕ್ಷ ರೂಪಾಯಿಗಳು ಖರ್ಚಾಗಿವೆ.

ಶ್ರೀ ಸಿ. ಅಪ್ಪಾಜಿ.— ೪ ತಿಂಗಳ ಹಿಂದೆ ತಾವೇ ಈ ಪ್ರಾಜೆಕ್ಟ್‌ನ ಶಂಕುಸ್ಥಾಪನೆಯನ್ನು ಹಾಕಿ ಬಂದಿದ್ದೀರಿ. ಆದರೆ ಇಲ್ಲಿಯವರೆಗೆ ಹೆಚ್ಚಿನ ಹಣವನ್ನು ಖರ್ಚು ಮಾಡಿಲ್ಲ ಎಂಬುದಾಗಿ ತಾವೇ ಹೇಳಿದಿರಿ. ಇದಕ್ಕೆ ಕಾರಣವೇನೆಂಬುದು ಗೊತ್ತಿಲ್ಲ. ಆದರೆ ಯೋಜನೆ ನಮ್ಮ ಕನಕಪುರ ತಾಲ್ಲೂಕಿನಲ್ಲಿ ಬಹಳ ಹಿಂದುಳಿದ ಪ್ರದೇಶದಲ್ಲಿ ಕಟ್ಟಲಾಗುವ ಪ್ರಾಜೆಕ್ಟ್. ಮತ್ತು ೨೦,೧೫೦ ಎಕರೆ ಹಾಗೂ ಇನ್ನೂ ಹೆಚ್ಚಿನ ಪ್ರದೇಶ ನೀರಾವರಿ ಪ್ರದೇಶವಾಗುವುದಕ್ಕೆ ಅವಕಾಶ ಇದೆ ಆದ್ದರಿಂದ ಆದಷ್ಟು ಜಾಗ್ರತೆ ಅಂದರೆ ತಾವು ಹೇಳಿದ ರೀತಿಯಲ್ಲಿ ೧೯೮೩–೮೪ನೇ ಇಸವಿಗಿಂತ ಇನ್ನೂ ಮೊದಲೇ ಈ ಪ್ರಾಜೆಕ್ಟ್‌ವನ್ನು ಮುಗಿಸುವುದಕ್ಕೆ ಸಾಧ್ಯವೇ ?

ಶ್ರೀ ಡಿ. ದೇವರಾಜ ಅರಸ್.—ಈಗ ಕೊಟ್ಟಿರುವ ಟೈಮಿಗೆ ಮಾಡಿ ಮುಗಿಸಿದರೆ ತಾವು ಸಂತೋಷ ಪಟ್ಟುಕೊಳ್ಳಬೇಕು. ಅದಕ್ಕೆ ಕಾರಣವೇನೆಂದರೆ ನಾವು ಈಗಾಗಲೇ ಬೇಕಾದಷ್ಟು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡುಬಿಟ್ಟಿದ್ದೇವೆ. ಅದೂ ತಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಅದೂ ಅಲ್ಲದೆ ನೀರಾವರಿಗಾಗಿ ಎಷ್ಟು ಹಣ ಒದಗಿಸಿದ್ದೇವೆ ಎಂಬುದು ನಮ್ಮ ಈ ಸಾರಿಯ ಆಯವ್ಯಯವನ್ನು ನೋಡಿದರೆ ಗೊತ್ತಾಗುತ್ತದೆ. This is a non-plan project because this comes under Cauvery. All of us know very well how much we are spending on irrigation and power. Though it is a non-plan project I have taken it up. That is why I am not able to get necessary funds at once to take up the works of non-plan projects which are under Cauvery.

ಶ್ರೀ ಎಂ. ವಿ. ರಾಜಶೇಖರನ್.—ಕನಕಪುರ ತಾಲ್ಲೂಕು ಬಹಳ ಹಿಂದುಳಿದಿದೆ ಎಂಬುದು ಮಾನ್ಯ ಮುಖ್ಯಮಂತ್ರಿಯವರಿಗೂ ಗೊತ್ತಿದೆ. ಅಲ್ಲಿ ನೀರಾವರಿ ಇರತಕ್ಕಂಥಾದ್ದು ಬಹಳ ಕಡಿಮೆ ಪರ್ಸೆಂಟ್. ಆದ್ದರಿಂದ ಈ ಪ್ರಾಜೆಕ್ಟನ್ನು ಆದಷ್ಟು ಶೀಘ್ರವಾಗಿ ಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ ? ಏಕೆಂದರೆ ತಾವೇ ಹೋಗಿ ಶಂಕುಸ್ಥಾಪನೆ ಹಾಕಿ ಬಂದಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ನಾನು ಹೋಗಿ ಶಂಕುಸ್ಥಾಪನೆ ಮಾಡಿ ಬಂದಿದ್ದೇ ತಪ್ಪೇ ?

ಶ್ರೀ ಎಂ. ವಿ. ರಾಜಶೇಖರನ್.—ಆದಷ್ಟು ಶೀಘ್ರವಾಗಿ ಮಾಡಿಕೊಡಿ. ಕನಕಪುರದಲ್ಲಿ ಬಡಜನಗಳೇ ಹೆಚ್ಚಿಗೆ ಇದ್ದಾರೆಂಬುದು ತಮಗೂ ಗೊತ್ತಿದೆ. ಇದರಿಂದ ಆಗತಕ್ಕಂಥ ನೀರಾವರಿ ಪ್ರದೇಶದಿಂದ ಸಾವಿರಾರು ಬಡ ಜನಗಳಿಗೆ ಅನುಕೂಲವಾಗುತ್ತದೆ. ಅಲ್ಲಿ ಸಾಹುಕಾರರು ಯಾರೂ ಇಲ್ಲ. ಆದಷ್ಟು ಶೀಘ್ರವಾಗಿ ಮಾಡುವುದಕ್ಕೆ ಪ್ರಯತ್ನ ಪಡಬೇಕು. ಮತ್ತೆ ನೀರಾವರಿಗೆ ಹೆಚ್ಚಿಗೆ ಗಮನ ಕೊಡುತ್ತಿದ್ದೀರಿ ಸಂತೋಷ. ಆದರೆ ಈ ಕನಕಪುರ ತಾಲ್ಲೂಕಿನಲ್ಲಿರುವ ಬಡ ಜನರ ಬಗ್ಗೆಯೂ ಹೆಚ್ಚಿನ ಗಮನವನ್ನು ಹರಿಸಿ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಪಕ್ಕದಲ್ಲಿ ಕುಳಿತಿರುವವರನ್ನೇ ಕೇಳಿ, ಅವರು ನಿಮಗಿಂತ ಬಡವರು ಎಂಬುದಾಗಿ ಹೇಳುತ್ತಾರೆ. ವರುಣಾ ನಾಲೆಗೆ ಶಂಕುಸ್ಥಾಪನೆ ಮಾಡಿದ ತಕ್ಷಣವೇ ಅವರಿಗೆ ನೀರು ಬಂತೇ ? ತಾವು ಹೇಳುವುದಕ್ಕೆ ನಮ್ಮ ವಿರೋಧವೇನೂ ಇಲ್ಲ. ಎಲ್ಲವನ್ನೂ ತಿಳಿದೇ ಏನಾದರೂ ಆಗಲಿ ಎಂಬುದಾಗಿ ಶಂಕುಸ್ಥಾಪನೆಯನ್ನು ಹಾಕಿರತಕ್ಕಂಥಾದ್ದು. ಪಣ ಒದಗಿಸುವ ವಿಚಾರದಲ್ಲಿ ನೋಡೋಣ. ೧೯೮೫-೮೪ನೇ ವರ್ಷಕ್ಕೆ ಮುಗಿಸುತ್ತೇವೆಂದು ಆಶೆಯನ್ನು ಇಟ್ಟಿದ್ದೇವೆ. ಅದಕ್ಕಿಂತ ಮುಂಚೆ ಮುಗಿದರೂ ಸಂತೋಷ. ಎರಡು ವರ್ಷಗಳಲ್ಲಿ ಮುಗಿಸುತ್ತೇವೆಂದು ಸುಮ್ಮನೆ ನಿಮಗೆ ಆಸೆ ತೋರಿಸಬಾರದು Rs. 10 crores is not a small amount. It started with Rs. one crore; it went to Rs. 2 crores, Rs. 3 crores and finally it come upto Rs. 10 crores. Nevertheless ಅದು ಮುಗಿಯುವುದರೊಳಗೆ ಇನ್ನೂ ಎರಡು ಕೋಟಿ ರೂಪಾಯಿ ಜಾಸ್ತಿಯಾದರೂ ಆಗಬಹುದು. ಈಗಿನ ಪ್ರಕಾರ ೨೦,೦೫೦ ಎಕರೆ ನೀರಾವರಿಗೆ ಪ್ರಯೋಜನವಾಗುವುದಾದರೆ ಅದಕ್ಕೆ ನಾನು ಸಂತೋಷ ಪಡುತ್ತೇನೆ. but let me see, Next time I will try to provide more funds. This year, it was not possible; why, because ಹೇಮಾವತಿ, ಹಾರಂಗಿ ಪ್ರಾಜೆಕ್ಟ್‌ಗಳೂ ಇನ್ನೂ ಮುಗಿದಿಲ್ಲ. ಈ ವರ್ಷ ಮುಗಿಯುತ್ತವೆ. ಅದೂ ಡ್ಯಾಂ ಮಾತ್ರ ಮುಗಿಯುತ್ತವೆ. ಇನ್ನು ನಾಲೆಗಳನ್ನು ತೆಗೆದು ಕೂಂಡರೆ ಅವಕ್ಕೆ ಇನ್ನೂ ನಾಲ್ಕರಷ್ಟು ದುಡ್ಡು ಬೇಕು. ಆದ್ದರಿಂದ ತಾವು ದೊಡ್ಡಮನಸ್ಸು ಮಾಡಿ ಸರ್ಕಾರಕ್ಕೆ ಜನರು ಕೊಡಬೇಕಾದಂತಹ ಸಾಲದ ವಸೂಲಿ, ನೀರಿನ ಕಂದಾಯ, ಬೆಟರ್‌ಮೆಂಟ್ ಲೆವಿಯನ್ನು ಕೊಡಿಸಿಕೊಡುವುದಕ್ಕೆ ಸಹಾಯ ಮಾಡಿ. ಕೆಲವು ಸ್ನೇಹಿತರಿದ್ದಾರೆ ಘಟಪ್ರಭಾ, ತುಂಗಭದ್ರ, ಮಲಪ್ರಭಾ ಈ ಏರಿಯಾಗಳಲ್ಲಿ ಬೆಟರ್‌ಮೆಂಟ್ ಲೆವಿ ಜಾಸ್ತಿಯಾಗಿದೆ ಎಂದು ನನ್ನ ಮೇಲೆ ಗುದ್ದಾಟ ಮಾಡುವುದಕ್ಕೆ ಬರುತ್ತಾರೆ. ಯಾವುದನ್ನೂ ಕೊಡದೆ 'ಮಾಡಿ, ಮಾಡಿ' ಎಂಬುದಾಗಿ ಹೇಳಿದರೆ ಏನು ಮಾಡೋಣ ? ಸುಮ್ಮನೆ ಅಂಗೈನಲ್ಲಿ ಆಕಾಶವನ್ನು ತೋರಿಸೋಣವೇ ?

I will try to see that it is taken up and completed early. Even if it is going to be completed by 1983-84, you must be thankful to the Government.

ಶ್ರೀ ಎಂ. ವಿ. ರಾಜಶೇಖರನ್.—ಕಂದಾಯವನ್ನು ವಸೂಲಿ ಮಾಡುವುದಕ್ಕೆ ನೀರು ಕಂದಾಯವನ್ನು ವಸೂಲಿ ಮಾಡುವುದಕ್ಕೆ, ಹಾಗೂ ಬೆಟರ್‌ಮೆಂಟ್ ಲೆವಿಯನ್ನು ವಸೂಲಿ ಮಾಡುವುದಕ್ಕೆ ನಾವು ಸಹಾಯ ಮಾಡುತ್ತೇವೆ. ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ನನ್ನ ಕಳಕಳಿ ಏನೆಂದರೆ ಸರ್ಕಾರದ ದುಂದು ವೆಚ್ಚವನ್ನು ಕಡಿಮೆ ಮಾಡಿದರೆ ಅದರಿಂದ ಬೇಕಾದಷ್ಟು ಕೆರೆಕಟ್ಟೆಗಳನ್ನು ಕಟ್ಟಬಹುದು. ಇದರ ಕಡೆಗೆ ಹೆಚ್ಚು ಗಮನವನ್ನು ಕೊಡಿ.

ಶ್ರೀ ಡಿ. ದೇವರಾಜ ಅರಸ್.—ಈಗ ತಮಗೆ ಅವಕಾಶ ಇದೆ. ಏನು ದುಂದು ವೆಚ್ಚ ಆಗಿದೆ ಅದನ್ನು ಹೇಳಿ. ಯಾವುದು ದುಂದು ವೆಚ್ಚ, ಯಾವುದನ್ನು ನಿಲ್ಲಿಸಬೇಕೆಂದು ಹೇಳಿ ಎಂದರೆ ಒಬ್ಬರೂ ಹೇಳಲಿಲ್ಲ ?

Institutions run by the Basaveswar Vidya Vardhaka Sangha Bagalkot.

201 SRI S. S. ARAKERI (Balloli).—Will the Minister for Education be pleased to state.—

(a) the total number of Colleges of Arts, Science, Commerce and Engineering etc., that are being run by the Basaveshwar Vidya Vardhska Sangha, Bagalkot ;